# ಆಹಾ ಸುದ್ದಿ!

★ ಸಸಿತೋಟ



ಅಮೆರಿಕದ ವಸ್ತು ಸಂಗ್ರಹಾಲಯವೊಂದು ಅಲ್ಲಿಗೆ ಭೇಟಿ ನೀಡುವವರಿಗೆ ಅಪ್ಪಟ ಚಿನ್ನದ ಶೌಚಾಲಯ ಬಳಸಲು ಅವಕಾಶ ಕಲ್ಪಿಸಿದೆ. ಚಿನ್ನದ ಸಿಂಹಾಸನದಲ್ಲಿ ಕೂರಲು ಅವಕಾಶ ಸಿಗದವರು ಕನಿಷ್ಠ ಇಲ್ಲಾದರೂ ಕೂರಬಹುದು, ಖಾಸಗಿಯಾಗಿ.

ಹೆಂಡತಿಯ ಮೇಲೆ ಬೇಸರ ಮಾಡಿಕೊಂಡ ಬ್ರಿಟನ್ ವ್ಯಕ್ತಿಯೊಬ್ಬ ತಮಾಷೆಗೆಂದು ಆಕೆಯನ್ನು ಇ ಹರಾಜು ಕಂಪೆನಿ ಇಬೇಯಲ್ಲಿ ಹರಾಜಿಗಿಟ್ಟಿದ್ದನಂತೆ. ಬಳಸಿದ ಕಾರಿಗೆ ಹೋಲಿಸಿ ಜಾಹೀರಾತು ನೀಡಿದ್ದ ಎಂಜಿನಿಯರ್ ಸೈಮನ್, 'ಇನ್ನೂ ಸಾಕಷ್ಟು ಮೈಲೇಜ್ ಕೊಡುತ್ತದೆ. ಬಿಡಿಭಾಗಗಳಿಗೆ ರಿಪೇರಿ ಬೇಕು' ಎಂದು ವರ್ಣಿಸಿದ್ದನಂತೆ. ಎರಡು ದಿನಗಳಲ್ಲೇ ಹೆಂಡತಿಗೆ ಗೊತ್ತಾದ ನಂತರ ಜಾಹೀರಾತು ಅಳಿಸಿ ಹಾಕಿದ ಸೈಮನ್, ಆಕೆಯನ್ನು ಖರೀದಿಸಲು 66 ಸಾವಿರ ಪೌಂಡ್ ಹರಾಜು ಕೂಗಿದ್ದನ್ನು ನೋಡಿ ಇನ್ನೂ ಹೆಚ್ಚು ಮೊತ್ತ ಬರುತ್ತಿತ್ತೇನೋ ಎಂದು ಹಳಹಳಿಸಿದನಂತೆ.



ಸ್ಪೇನಿನ ಬಿಲ್‌ಬಾವೋದಲ್ಲಿ ಸಿನಿಪ್ರಿಯರಿಗೆ ಜೋಡಿ ಹಾಸಿಗೆಯ ಮೇಲೆ ಮಲಗಿ ಸಿನಿಮಾ ವೀಕ್ಷಿಸುವ ಅವಕಾಶ ನೀಡಲಾಗಿದೆಯಂತೆ. ಹೌಸ್‌ಫುಲ್ ಬೋರ್ಡ್ ಹಾಕಲು ಒಳ್ಳೆಯ ಉಪಾಯ.

ಬೆಂಗಳೂರಿನ ಹುಡುಗಿ ಕರಿಷ್ಮಾ ವಾಲಿಯಾ ನಾಯಿಯನ್ನು ಇಷ್ಟಪಡದ ವರನನ್ನು ತಿರಸ್ಕರಿಸಿದ್ದು ಸಾಮಾಜಿಕ ಜಾಲತಾಣದಲ್ಲಿ ದೊಡ್ಡ ಸುದ್ದಿಯಾಗಿದೆ. ಆಕೆಯನ್ನು ವಿವಾಹವಾಗುವ ಹುಡುಗ ಆಕೆಯ ಸಾಕು ನಾಯಿಯನ್ನೂ ಪ್ರೀತಿಸಬೇಕಂತೆ. ಯಾರನ್ನು ಹೆಚ್ಚು, ಯಾರನ್ನು ಕಡಿಮೆ ಪ್ರೀತಿಸಬೇಕು ಎಂಬ ಅನುಮಾನ ಬಗೆಹರಿಸಿಕೊಂಡು ಆ ಹುಡುಗ ಇನ್ನೊಂದು ಅವಕಾಶ ಕೋರಬಹುದಿತ್ತು.



ಚೀನಾದ ಹುನಾನ್ ಪ್ರಾಂತ್ಯದ ಕಣಿವೆಯಲ್ಲಿ ಸೊಂಟಕ್ಕೆ ಹಗ್ಗ ಕಟ್ಟಿಕೊಂಡು ನರ್ತಿಸುವ ಈ ಜೋಡಿ ಅಬ್‌ಸೀಲಿಂಗ್ ಎಂಬ ನೃತ್ಯ ಪ್ರಕಾರದಲ್ಲಿ ಪರಿಣಿತರಂತೆ. ಕುಣಿಯಲಾರದವನಿಗೆ ಅಂಗಳ ಡೊಂಕು ಎಂಬ ಗಾದೆಯನ್ನು ಇಲ್ಲಿ ಯಾವ ರೀತಿ ಅಂಕುಡೊಂಕಾಗಿ ರಚಿಸಬೇಕೋ!

ಅಮೆರಿಕದಲ್ಲಿ ನವೋದ್ಯಮವೊಂದು ಪಿಜ್ಜಾ ಮಾಡಲು, ಗ್ರಾಹಕರ ಮನೆಗೆ ತಲುಪಿಸಲು ರೊಬಾಟ್ ಬಳಸುತ್ತಿದೆ. ಪಿಜ್ಜಾ ಬರುವುದು ತಡವಾದರೆ ಬಯ್ಯಲು ರೊಬಾಟ್ ಭಾಷೆಯನ್ನೇ ಕಲಿಯಬೇಕಾಗಬಹುದು.

